ಕಥೆ

# ಹಲಗೆಯ ಸದ್ದು




## ಸದಾಶಿವ್ ಸೊರಟೂರು

ಕಲೆ: ಸಂತೋಷ್ ಸಸಿಹಿತ್ಲು


'ಟಣ್ ಟಣ್ ಟಣಕ್...' ಹಲಗೆಗೆ ಎರಡು ಏಟು ಹಾಕಿದ ಹನುಮ. ಹುಟ್ಟಿದ ಸದ್ದು ಅವನ ಸುತ್ತವೇ ಒಂದು ಸತ್ತು ಸುತ್ತಿ ಕರಗಿತು. ಆದರೆ, ಆ ಸದ್ದು ಎಳ್ದಂತಾಗಿ 'ಚುಚ್ಚ್ ಚುಚ್ಚ್...' ಎಂದು ಲೊಚಗುಟ್ಟಿದ. ಗೊಣಗುತ್ತಾ ತನ್ನ ಆಣಿ ತುಂಬಿದ ಎಡಗಾಲು ಎಳೆಯುತ್ತಾ ತೇರು ಮನೆ ಹತ್ತಿರ ಸುಳಿದ. ಹಗಲೊಂದು ಕತ್ತಲೊಳಗೆ ಸದ್ದಿಲ್ಲದೆ ಕರಗುತ್ತಿತ್ತು. ಆವರಿಸಿದ ಕತ್ತಲಲ್ಲಿ ಚೂರೇ ಚೂರು ಉಳಿದ ಬೆಳಕಿನಲ್ಲಿ ಎಲ್ಲವೂ ಮಸುಕು. ಅಗಸಿಯಲ್ಲಿ ಉರಿಯಬೇಕಿದ್ದ ದೀಪಗಳನ್ನು ಇನ್ನೂ ಹಾಕಿರಲಿಲ್ಲ. ಅಲ್ಲಲ್ಲಿ ಬಿದ್ದಿದ್ದ ಚೂರುಪಾರು ಕಾಗದದ ತುಂಡುಗಳನ್ನು ಆಯ್ದು ಒಟ್ಟಾಕಿ ಬೀಡಿ ಸೇದಲು ಮೀಸಲಿಟ್ಟ ಕಡ್ಡಿಪೆಟ್ಟಿಗೆಯನ್ನ ಜೇಬಿನಿಂದ ತೆಗ್ದು ಕತ್ತಲಲ್ಲಿ ಗೀರಿದ. ಚಿಟಿಕೆಯಷ್ಟು ಬೆಳಕು ಕಾಗದ ತಬ್ಕೊಂಡು ಬೊಗಸೆಯಾಗಿ ಬೆಳೀತು. ಚರ್ಮದ ಹಲ್ಗೆಯನ್ನು ಚೂರು ಚೂರೆ ಹತ್ರ ತಂದು ಕಾಯ್ಸಿ ಕಾಯ್ಸಿ ತೆಗೆದು, ಬೆರಳಲ್ಲಿ ಬಾರಿಸಿ ನೋಡಿದ. ಅವನ ಬಾಯಿಂದ ಅವನಿಗೆ ಗೊತ್ತಿಲ್ಲದೆ 'ಅಲೆಲೆ...' ಎನ್ನುವ ಉದ್ಗಾರವೊಂದು ಹುಟ್ಟಿ ಸತ್ತಿತು. ಹಲಗೆ ಖಿಣಖಿಣನೆ ನುಡಿಯಿತು. ಉರೀತಾ ಇರೊ ತುಂಡು ಬೆಂಕಿ ಬಿಟ್ಟು ಹೊಸ ಹುರುಪಿನೊಂದಿಗೆ ಎದ್ದ. ಊರು ಇವನನ್ನು ಗಮನಿಸದೆ ತನ್ನ ಪಾಡಿಗೆ ತಾನಿತ್ತು.

ಮಾದಪ್ಪನ ಮುರುಕು ನೆರಿಕೆಯ ಚಹಾದ ಹೋಟೆಲ್ ಮುಂದೆ ನಾಲ್ಕಾರು ಜನರನ್ನು ಬಿಟ್ಟರೆ ಅಗಸಿ ಖಾಲಿ ಇತ್ತು. ಮಾದಪ್ಪ ಒಗ್ಗರಣೆ ಮಂಡಕ್ಕಿ ಮಾಡುವಾಗ ಪಾತ್ರೆಯಾಡಿಸುವ ಸದ್ದು ಒಂದು ಲಯದೊಂದಿಗೆ ಜನರ ಮಾತುಗಳಿಗೆ ಹಿನ್ನೆಲೆಯಾಗಿ ಬರುತ್ತಿತ್ತು. ಹಾಲಿನ ಡೈರಿಗೆ ಹಾಲು ಹೊಯ್ಯುವವರಲ್ಲಿ ಆಗೊಬ್ಬರು ಈಗೊಬ್ಬರನ್ನು ಬಿಟ್ಟರೆ ಅರ್ಧಂಬರ್ಧ ಇರುಳಿನಂತೆ ಜನರೂ ವಿರಳ.

ಖಿಣಖಿಣನೆ ಅನ್ನುವ ಹಲಗೆ ಬಡೀತ ಹನುಮ ಹೊರಟ. ಐವತ್ತು ದಾಟಿದ, ಎಡಗಾಲು ಎಳೆಯುವ, ಮಾಸಲಾದ ಬಟ್ಟೆಯಲ್ಲಿನ ಹನುಮ ಕಾಲವೊಂದು ಬಿಸಾಕಿ ಹೋದ ಹಳೆ ಕಾಲದ ವಸ್ತುವೆಂಬಂತೆ ಕಾಣುತ್ತಿದ್ದ. ನಾಲ್ಕು ಮನೆ ಇರುವ ಬ್ರಾಹ್ಮಣರ ಬೀದಿಯಿಂದ ಹೊರಟು ಬಲಕ್ಕೆ ಲಿಂಗಾಯಿತರ ಕೇರಿಗೆ ತಿರುಗಿ ಅಲ್ಲಿಂದ ಕುರುಬ್ರ ಓಣಿ ತಲುಪಿ ಅದರಾಚೆಗೆ ಮೂವತ್ತು ಮನೆ ಇರುವ ಮಾದ್ರ ಕೇರಿಗೆ ನುಗ್ಗದೆ ಹೊರಗೆ ನಿಂತು ಹಲಗೆ ಸದ್ದಿನೊಂದಿಗೆ 'ನಾಳೆ ಗುಡಿ ಮುಂದೆ ಪಂಚಾಯ್ತಿ ಐತ್ರಪೊ ಮನೆಗೊಂದ್ ಆಳು ಬರ್ಬೇಕಂತ್ರಪೊ' ಅಂತ ಜೋರಾಗಿ ಕೂಗಿದ. ಕೂಲಿಯಿಂದ ಬಂದವರು ಬೆಲ್ಲದ ಚಹಾ ಹೀರುವ ಮೊದಲಿನ ಗುಟುಕಿಗೇ ಇವನ ಜೋರು ಕೂಗನ್ನು ನೆಂಚಿಕೊಂಡರು. ಎರಡು ಪಾಕೇಟು ಸಾರಾಯಿ ಹಾಕಿದ್ರೆನೆ ಅವ್ನ ಕೂಗಿಗೊಂದು ಲಯ ಬರ್ತಿತ್ತು. ಊರಲ್ಲಿ ಅವನು ಬರೀ ಹನುಮನಲ್ಲದೆ, ಹಲಗೆ ಹನುಮನೆಂದೆ ಹೆಸರಾಗಿದ್ದ.

* * *

ಹೊಲಗೇರಿಯ ಸಣ್ಣೀರ ಸತ್ತು ನಾಲ್ಕು ತಿಂಗಳೇ ಸಂದಿವೆ. ಬಿದ್ದಿದ್ದೆ ನೆವವಾಗಿ ಹೆಂಡತಿ ಮತ್ತು ಮಗನನ್ನು ಹಾಗೂ ಎರಡು ಕೋಣೆಯ ಮುರುಕು ಮನೆಯನ್ನು